ಮೈಸೂರ ಗೆಜೆಟ್.

ನಂ. 35 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1889.

ಬೆಂಗಳೂರು, ಶನಿವಾರ, ಆಗಸ್ಟ್ ತಾ|| 31, ಸನ್ 1889.

ಟಿಪ್ಪಣಿ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್‌ಟೆಂಡೆಂಟರು, ಕಾಂವೆಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿವೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟ್ ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸುಗಳು.

3ನೇ ಭಾಗ–ಶ್ರೀಮಾ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್‌ಗಳು ವ ರೆಗ್ಯುಲೇಷ್ಷಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 20ನೇ ಆಗಸ್ಟ್ 1889.

ನಂ. 132.—ಸಕಲ ಜನಗಳಿಗೂ ತಿಳಿಯುವಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೊತ್ತೀಸ್ತರ ಕ್ರಮಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಜ್ಞಾಧೀನ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ವೈಕಿ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ವೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ವೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ವೊಬಲನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್‌ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರ್ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ ಈ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಿಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ವೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮವ್ಕೂಫ್ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ವೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದಿ ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡಿಪ್ಲೋಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಸಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟಿಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ವಳಪಟ್ಟಿರುತ್ತೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಸರಕಾರಕ್ಕೆ ಕೊಟ್ಟುವೇ ಯಾಡಬೇಕಾದ ಕ್ಯೆ ಬೇರೀಜು.	ಸಾಲಿಯಾನಾ ಸರಕಾರದ ಕಂದಾಯ ಟೆರೆಂಟ್.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಆಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
				ಖಂ. ಕೊ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಬೆಂಗಳೂರು.	ಜಿಗಣಿಕೋಟೆ	ನಂದಗುಡಿ	1 ದಳಸಗೆರೆ	91 10 5½	1284—2—4	1182—0—0	2903—11—8 ಬಿಡ್ಡಿ ಪಟ್ಟಾ ನೋಟೀಸ್ ಫೀ ನಾಯಿ	1889ನೇ ಇಸವಿ ಸಪ್ಟೆಂಬರ್ 27ರಲ್ಲು ತಾಲ್ಲೂಕು ಕಛೇರಿಯಲ್ಲಿ ಅನುಕೂಲದಾರ್ರ ರೂಬರು
			2 ವೆಂಕಟಾ	7 4 0				
			3 ಮೇದೂ	11 1 8½				
			4 ದ್ದನಹ	33 13 12½				
			5 ಗೆದ್ದಲಹ	29 19 11½				

ಷರಾ.—1. ಮೇಲ್ಕಂಡ ಪ್ರತಿ ಗ್ರಾಮಕ್ಕೂ ಬೇರೆ ಬೇರೆಯಾಗಿ ಕ್ವಿಟ್‌ರೆಂಟ್ ದಾಖಿಲ್ಮಾಡಲ್ಪಟ್ಟಿರುವದಿಲ್ಲ.

2. ಜೋಡೀದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಾಗಲಿ, ಉಂಟುಮಾಡಲ್ಪಟ್ಟ ತಮಾಂ ಹಿಡುವಳಿಗಳಿಗೂ, ದೇಣಿಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರೀ ಹರಾಜು ವಳಪಟ್ಟಿರುವದಿಲ್ಲ.

ತಾರೀಖು 17 ಆಗೆಸ್ಟು 1889.

ನಂ. 124.—ಸಕ್ರ 1889ನೇ ಇಸವಿ ಫಿಬ್ರವರಿ 5ನೇ ಮಕ್ಕುಂ 7140—71—200ನೇ ನಂಬರುಳ್ಳ ಪ್ರೋಕ್ಲೇಡಿಂಗ್ಸ್‌ನಲ್ಲಿ ಘಾಯಿಷ್ ಮಾಡೋಸಾದ ರೂಲ್ಸಿನ 1ನೇ ಕಲಮಿನ ನಿಬಂಧನೆಗಳನುಸರಿಸಿ, ನಂಜನಗೂಡು ತಾಲ್ಲೂಕು ಅಮಲ್ದಾರ್ ರಾಘವೇಂದ್ರರಾಯರಿಗೆ ಅವರು ಪುನರ್ನೇಮಕಗೊಳ್ಳುವ ತಾರೀಖು ಲಾಗಾಯತು 9 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 125.—ಈ ತಾಲ್ಲೂಕು ಅಮಲ್ದಾರ್ ವೆಂಕಟಾಚಲಯ್ಯನವರಿಗೆ ಅವರು ಪುನರ್ನೇಮಕಗೊಳ್ಳುವ ತಾರೀಖು ಲಾಗಾಯತು 15 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ವೆಂಕಟಾಚಲಯ್ಯನವರು ರಜಾದ ಮೇಲೆ ಯಿರುವ ಪರ್ಯಂತ ಯಾ ಮತ್ತೊಂದು ಹುಕುಂ ಕೊಡುವ ವರಿವಿಗೂ ತಾಲ್ಲೂಕು ಸಿರಸ್ತೇದಾರ್ ಕೇಶವಾಚಾರ್ರು ತಿರಾ ತಾಲ್ಲೂಕು ಚಾರ್ಜನ್ನ ವಹಿಸಿರ ತಕ್ಕದ್ದು.

ತಾರೀಖು 23ನೇ ಆಗಸ್ಟು 1889.

ನಂ. 134.—ಇದರ ಕೆಳಗೆ ನಮೂದಾಗುವ ಅಮಲ್ದಾರ್ರುಗಳ ವರ್ಗಾವರ್ಗಿಯನ್ನು ಅಪ್ಪಣೆ ಮಾಹೋಣಾಗಿರುತ್ತೆ.

ಬೇಲೂರು ತಾಲ್ಲೂಕು ಅಮಲ್ದಾರ್ ಎಸ್. ಕೃಷ್ಣರಾವ್ ಬಿ. ಎ. ಯವರು, ಕಾರ್ಕಾಹಳ್ಳಿ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ತಿಪಟೂರು ತಾಲ್ಲೂಕು ಅಮಲ್ದಾರ್ ಯಂ. ರಾಮಸ್ವಾಮಿಅಯ್ಯರ್ ಯವರು, ಮಳವಳ್ಳೀ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ದೇವನಹಳ್ಳಿ ತಾಲ್ಲೂಕು ಅಮಲ್ದಾರ್ ಬಿ. ಲಕ್ಷ್ಮಣರಾವ್ ಯವರು, ತಿಪಟೂರು ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ವ್ಯಾಜಿಸ್ಟ್ರೇಟರಾಗಿರತಕ್ಕದ್ದು.

2. ಈ ಇಸ್ತಿಹಾರಿನ ದೆಕೆಯಿಂದ, ಅಮಲ್ದಾರ್ ಎಸ್. ಕೃಷ್ಣರಾಯರನ್ನ ಬೇಲೂರಿಂದ ಮಳವಳ್ಳಿಗೂ ಮತ್ತು ಅಮಲ್ದಾರ್ ಬಿ. ಲಕ್ಷ್ಮಣರಾಯರನ್ನ ದೇವನಹಳ್ಳಿ ಯಿಂದ ಕಾರ್ಕಾಹಳ್ಳಿ, ತಾಲ್ಲೂಕಿಗೂ ಮಾಪೆ ಮಜಕೂರ್ 15ನೇ ಮತ್ತು೦ 123ನೇ ನಂಬರುಳ್ಳಇಾ ಹಾರಿನಿಂದ ಮಾಹೋಣಾಗಿದ್ದ ವರ್ಗಾವರ್ಗಿಯು ರದ್ದಾಗಿರುತ್ತೆ.

ನಂ. 135.—ಇದರಡಿಕಂಡ ಅಮಲ್ದಾರರುಗಳ ವರ್ಗಾವರ್ಗಿಯನ್ನ ಅಪ್ಪಣೆ ಕೊಡೋಣಾಗಿರುತ್ತದೆ.

ಕೋಲಾರ ತಾಲ್ಲೂಕು ಅಮಲ್ದಾರ್ ಅಬ್ದುಲ್ ಅಜೀಜ್‌ಯವರು, ತುಮಕೂರು ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ತುಮಕೂರು ತಾಲ್ಲೂಕು ಅಮಲ್ದಾರ್ ಹೇಮಾ ಪನುಮಂತಯ್ಯನವರು ಕೋಲಾರ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ತಾರೀಖು 20ನೇ ಆಗಸ್ಟ್ 1889.

ನಂ. 126.—ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಮೆ॥ ಪಿ. ಎಸ್. ಪೂರ್ಣಯ್ಯನವರಿಗೆ, 1889ನೇ ಇಸವಿ ಜುಲ್ಯೆ 12ನೇ ಮತ್ತು೦ 453ನೇ ನಂಬರುಳ್ಳ ಇಸ್ತಿಹಾರಿನಲ್ಲಿ ಕೊಡೋಣಾಗಿದ್ದ ಒಂದು ತಿಂಗಳ ಪ್ರಿವಿಲೀಜ್ ರಜಾಕ್ಕೆ ಜಾಸ್ತಿಯಾಗಿ ಯಿನ್ನೊಂದು ತಿಂಗಳ ರಜಾ ಕೊಡೋಣಾಗಿರುತ್ತದೆ.

ನಂ. 127.—ಕಡೂರು ತಾಲ್ಲೂಕು ಅಮಲ್ದಾರ್ ಟಿ. ಶ್ರೀನಿವಾಸರಾಯರಿಗೆ, 1889ನೇ ಇಸವಿ ಫಿಬ್ರವರಿ 5ನೇ ಮತ್ತು೦ 7140—71 ಸರ್ಕ್ಯುಲರ್ 200ನೇ ನಂಬರುಳ್ಳ ಪ್ರೊಸೀಡಿಂಗ್ಸ್‌ನಲ್ಲಿ ಫಾಯಿಸ್ ಮಾಡೋಣಾದ ರೂಲ್ಸ್‌ಗಳ 1ನೇ ಕಲಮಿನ ನಿಬಂಧನೆಯನ್ನ ನುಸರಿಸಿ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು 8 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 128.—ಡೆಪ್ಯುಟಿ ಕಮ್ಮಿಷನರ್ ಮೆ॥ ಪಿ. ಎಸ್. ಕೃಷ್ಣಮೂರ್ತಿಯವರು, ಸ್ ೧889ನೇ ಇಸವಿ ಮಾರ್ಚಿ 23ನೇ ಮತ್ತು೦ ಸರ್ಕ್ಯುಲರ್ A ನಂಬರುಳ್ಳ ಇಸ್ತಿಹಾರಿನ ದೆಕೆಯಿಂದ ಕೊಡೋಣಾಗಿದ್ದ ಯರಡು ತಿಂಗಳ ಪ್ರಿವಿಲೀಜ್ ರಜಾವನ್ನ ಅದೇ ತಿಂಗಳ 30ನೇ ತಾರೀಖಿನ ಮಧ್ಯಾನ್ನದಿಂದ ಉಪಯೋಗಿಸಿಕೊಂಡು 1889ನೇ ಇಸವಿ ಮೆ 13ನೇ ತಾರೀಖಿನ ಮಧ್ಯಾನ್ಹಾತ್ಪರ ಬೆಂಗಳೂರು ಡಿಸ್ಟ್ರಿಕ್ಟಿನ ಚಾರ್ಜನ್ನ ವಹಿಸಿರುತ್ತಾರೆಯಾಗಿ, ಅವರು ಉಪಯೋಗಿಸಿಕೊಳ್ಳದೇ ಪೂಳದಿರುವ 16 ದಿವಸಗಳ ರಜಾವನ್ನ ಇದರ ದೆಸೆಯಿಂದ ರದ್ದುಪಡಿಸೋಣಾಗಿರುತ್ತೆ.

ನಂ. 130.—ಈ ಕೆಳಗೆ ನಮೂದಾಗುವ ಅಮಲ್ದಾರರುಗಳ ವೊಕರರಾತಿ ವ ವರ್ಗಾವರ್ಗಿಗಳನ್ನ ಅಪ್ಪಣೆ ಮಾಹೋಣಾಗಿರುತ್ತದೆ.

ಕೊಪ್ಪ ತಾಲ್ಲೂಕು ಅಮಲ್ದಾರ್ ಲಕ್ಷ್ಮೀನಾರಣಪ್ಪನವರು, ಬಿಡ್ತಿ ಹೊಂದಿದ ಮೆ॥ ರಾಘವೇಂದ್ರರಾಯರಿಗೆ ಬದಲಾಗಿ ಶ್ರೀರಂಗಪಟ್ಟಣ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ಜಗಳೂರು ತಾಲ್ಲೂಕು ಅಮಲ್ದಾರ್ ಆರ್. ಲಕ್ಷ್ಮಣರಾಯರು, ಕೊಪ್ಪ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ಮೂಡಿಗೆರೆ ತಾಲ್ಲೂಕು ಅಮಲ್ದಾರ್ ಕಂಠೀರವಾಚಾರ್ರು ಗುಬ್ಬೀ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ಯಸ್. ಶ್ರೀನಿವಾಸರಾಯರು ಮೂಡಿಗೆರೆ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿರತಕ್ಕದ್ದು.

ನಂ. 131.—ಇದರಡಿಕಂಡ ಅಮಲ್ದಾರ್ರುಗಳ ವ ಡೆಪ್ಯುಟಿ ಅಮಲ್ದಾರರುಗಳ ವೊಕರರಾತಿ ವ ವರ್ಗಾವರ್ಗಿಗಳನ್ನ ಅಪ್ಪಣೆ ಮಾಹೋಣಾಗಿರುತ್ತೆ.

ಸೊರಬ ತಾಲ್ಲೂಕು ಅಮಲ್ದಾರ್ ಎ. ವೀರರಾಘವಲುನಾಯಡರು ತಮ್ಮೊಗ್ಗು ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿ ಸ್ಪೈಟರಾಗಿರತಕ್ಕದ್ದು.

(ಹೊಸದುರ್ಗದ ಮಾಜೀ ಡೆಪ್ಯುಟಿ ಅಮಲ್ದಾರ್) ವೆಂಕಟರಾಯರು ಸೊರಬ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿ ಸ್ಪೈಟರಾಗಿರತಕ್ಕದ್ದು.

ತೀರ್ಥಹಳ್ಳೀ ತಾಲ್ಲೂಕು ಅಮಲ್ದಾರ್ ಜೀ. ಶ್ರೀನಿವಾಸರಾಯರು, ಜಗಳೂರು ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿ ಸ್ಪೈಟರಾಗಿರತಕ್ಕದ್ದು.

(ಹಾಸನ ಡಿಸ್ಟ್ರಿಕ್ಟು ಮಾಜಿ ರವಿನ್ಯೂ ಶಿರಸ್ತೇದಾರ್) ಟಿ. ಆರ್. ವೆಂಕಟಸುಬ್ಬಯ್ಯನವರು, ತೀರ್ಥಹಳ್ಳೀ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಪೈಟರಾಗಿರತಕ್ಕದ್ದು.

ಅಬ್ದುಲ್ ರಹಿಮ್ಮಾ ಮೀಕರಿ, ಬಿ. ಎ. ಯವರು, ಬಿಡ್ತಿ ಹೊಂದಿದ ವೆಂಕಟರಾಯರಿಗೆ ಬದಲಾಗಿ ಹೊಸದುರ್ಗ ಡೆಪ್ಯುಟಿ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಪೈಟರಾಗಿರತಕ್ಕದ್ದು.

ತಾರೀಖು 7ನೇ ಆಗಸ್ಟ್ ಸಂ 1889.

ನಂ. 113.—ಇದರಿಂದ ವ್ಯಕ್ತಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟಿನ ಇದರಡಿ ಕಂಡ ಡಿಪೋಗಳಲ್ಲಿ ತೇಗ ಮತ್ತು ಯಿತರ ಜಾತಿ ಮರಗಳು ವ ಬೊಂಬುಗಳು ಮತ್ತೊಂದು ಹುಕುಂ ಕೊಡುವ ಪರಿಯಂತ ಇದರಡಿಕಂಡ ತಖ್ತೆಯಲ್ಲಿ ನಮೂದಿರುವ ದರಗಳ ಪ್ರಕಾರ ವಿಕ್ರಯಿಸಲ್ಪಡತಕ್ಕದ್ದು.

ತರಹೆಗಳು.	ಲಕ್ಕವಳ್ಳಿ ಡಿಪೋ:	ತರೀಕೆರೆ ಡಿಪೋ.	ಬಿಕ್ಕಮಗಳೂರು ಡಿಪೋ.
	ಘನಅಡಿ 1ಕ್ಕೆ	ಘನಅಡಿ 1ಕ್ಕೆ	ಘನಅಡಿ 1ಕ್ಕೆ
ತೇಗ, ಅವ್ವಲ್ ತರಹೆ	1 8 0	1 10 0	1 12 0
,, ದುಯ್ಯಂ ,, ...	1 4 0	1 6 0	1 8 0
,, ತಿಯ್ಯಂ	1 0 0	1 2 0	1 4 0
ಮನ್ನಾಜಾತಿ, ಅವ್ವಲ್ ತರಹೆ :. ..	0 13 0	0 15 0	1 0 0
,, ದುಯ್ಯಂ ,, ...	0 11 0	0 13 0	0 14 0
ಮನ್ನಾಜಾತಿ ಅಲ್ಲದ್ದು ಅವ್ವಲ್ ತರಹೆ	0 8 0	0 10 0	0 12 0
,, ದುಯ್ಯಂ ,, ...	0 7 0	0 9 0	0 11 0
ತೇಗದ ಕೂಚಗಳು	0 12 0	0 14 0	0 15 0
ಕಾಡುಜಾತಿ ಕೂಚಗಳು .. :	0 6 0	0 8 0	0 8 0
	ದರ ನೂರಕ್ಕೆ	ದರ ನೂರಕ್ಕೆ	ದರ ನೂರಕ್ಕೆ
ಸಂಣ ಬಿದರು	5 0 0	5 8 0	6 0 0
ದೊಡ್ಡ ಬಿದರು	12 0 0	13 0 0	12 0 0

ಬಹೋಜೀವ್ ಹುಕುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರಿಟರಿ.